ಲೋಕವ್ಯವಹಾರದ ಯಾವ ನೀತಿನಡತೆಯೇ ಇರಲಿ, ಶೀಲ ಶಿವಾಚಾರಗಳೇ ಇರಲಿ, ಅವೆಲ್ಲ ಆವಿರ್ಭವಿಸಿದುದು ಇದೇ ದಿವ್ಯಭಕ್ತನ ಹೃದಯದಲ್ಲಿ. ನಿಜವಾದ ಒಬ್ಬ ದೇವನಿಗೆ ಕುಲ ಜಾತಿ ಇಲ್ಲದಿರುವಂತೆ, ನಿಜವಾದ ನೀತಿಗೆ ಕಾಲ ದೇಶ ಕುಲ ಜಾತಿ ಇಲ್ಲ. ನಿಜವಾದ ನೀತಿ ಹರಿವುದು ಎಲ್ಲಿಂದ? ಲಿಂಗದಿಂದ, ಲಿಂಗಕ್ಕೆ ಅಂಗವಾದ ಲಿಂಗಾಂಗದಿಂದ. ಲಿಂಗ ನೀತಿಯ ಬೆಳೆಯ ನಿಲುವನ್ನು ನೋಡಿಕೊಂಡು ಬರೋಣವೆ? ನೋಡಿ, ಕೇಳಿ:

೧. **ಮರ್ತ್ಯಲೋಕವೆನ್ನುವುದು ಕರ್ತಾರನ ಕಮ್ಮಟ,**
**ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರು**
**ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು.**

೨. **ದೇವಲೋಕ ಮರ್ತ್ಯಲೋಕ ಬೇರಿಲ್ಲ,**
**ಸತ್ಯವ ನುಡಿದರೆ ದೇವಲೋಕ,**
**ಮಿಥ್ಯವ ನುಡಿದರೆ ಮರ್ತ್ಯಲೋಕ.**
**ಸತ್ಯದ ಮನೆಯಲ್ಲಿ ಶಿವನಿರ್ಪನಲ್ಲದೆ,**
**ಅಸತ್ಯದ ಮನೆಯಲ್ಲಿ ಶಿವನಿರ್ಪನೆ?**

೩. **ನಡೆಯೊಳಗೆ ನುಡಿ ತುಂಬಿ, ನುಡಿಯೊಳಗೆ ನಡೆ ತುಂಬಿ,**
**ನಡೆ ನುಡಿ ಎರಡನು ಪರಿಪೂರ್ಣ ತುಂಬಿ,**
**ಲಿಂಗವ ಕೊಡಬಲ್ಲಾತನೇ ಶರಣ.**

೪. **ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿರೆ**
**ಹಿಡಿದಿರ್ದ ಲಿಂಗ ಘಟಸರ್ಪ**

೫. **ದಯವಿಲ್ಲದ ಧರ್ಮವದಾವುದಯ್ಯ?**
**ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ**
**ದಯವೇ ಧರ್ಮದ ಮೂಲವಯ್ಯ**

೬. **ಸಕಲ ಜೀವಾತ್ಮರಿಗೆ ಲೇಸನೇ ಬಯಸುವವರು**
**ದೇವನ ಕುಲದವರು, ಕುಲವಂತರು.**

೭. **ಭಕ್ತನು ಶಾಂತನಾಗಿರಬೇಕು, ಭೂತಹಿತವಚನವ**
**ನುಡಿಯಬೇಕು ಸಕಲಪ್ರಾಣಿಗಳ ತನ್ನಂತೆ**
**ಭಾವಿಸಬೇಕು, ಸಕಲ ಇಂದ್ರಿಯಗಳು ತನ್ನ**
**ವಶಗತವಾಗಿರಬೇಕು. ಭಕ್ತನು ತಾನು ತಾನಾಗಿರಬೇಕು.**
**ಸಕಲ ಪ್ರಾಣಿಗಳ ತನ್ನಂತೆ ಕಾಣಬೇಕು.**

೮. **ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ**

೯. **ಕಂಡ ಭಕ್ತರಿಗೆ ಕೈಮುಗಿಯುವಾತ ಭಕ್ತ**
**ಮೃದುವಚನವೇ ಸಕಲ ಜಪ**
**ಮೃದುವಚನವೇ ಸಕಲ ತಪ**
**ಸದುವಿನಯವೇ ಸದಾಶಿವನ ಒಲುಮೆ.**

೧೦. **ಎನಗೆ ನಾನೇ ಹಗೆ ; ಎನಗೆ ನಾನೇ ಕೆಳೆ.**
**ಬಾಗಿದ ತಲೆಯ, ಮುಗಿದ ಕೈಯಾಗಿರಿಸು**
**ಕೂಡಲ ಸಂಗಮದೇವಾ**

ಶರಣರು ತಮ್ಮಲ್ಲಿ ಬೆಳೆದ ನೀತಿಯ ನಿಲುವಿನಲ್ಲಿ ನಾವು ಇನ್ನೂ ಇಂತಹ ಮುತ್ತು, ರತ್ನ, ವಜ್ರ, ವೈಡೂರ್ಯಗಳ ತೆನೆಗಳನ್ನು ಕಾಣಬಹುದು.

ನಾವಿಲ್ಲಿ ವಿಚಾರಿಸಬೇಕಾದ ವಿಷಯ, ಶರಣರ ಪೂಜೆಯಲ್ಲಿ ಸನ್ನಿಹಿತವಾಗಿರುವ ನೀತಿ ಗುಣ ಶೀಲ ಸದಾಚಾರಗಳು, ಶಾಂತಿ ಸಮಾಧಾನ ಕ್ಷಮೆ ದಮ ವಿವೇಕ ವೈರಾಗ್ಯ ವಿಶ್ವಾಸಗಳು. ನೀತಿ ನಡತೆ ಇಲ್ಲದೆ, ಆಚಾರ ವಿಚಾರವಿಲ್ಲದೆ, ಶಾಂತಿ ಸೈರಣೆ ಇಲ್ಲದೆ ಪೂಜೆ ಇಲ್ಲ; ಪೂಜೆಯಿಲ್ಲದೆ ದೇವನಿಲ್ಲ. ದೇವನಿಲ್ಲದೆ ಮಾನವಜೀವನಕ್ಕೆ, ವಿಶ್ವ ಬ್ರಹ್ಮಾಂಡಗಳು ಗತಿಗೊಂಡಿರುವ ಜಗಜ್ಜೀವನಕ್ಕೆ ಅರ್ಥವಿಲ್ಲ. ದೇವನಿಗೆ ಪೂಜೆಯಾಗಬಲ್ಲ ಜೀವನದ ಕಾಯದ ವ್ಯವಹಾರ ನೀತಿ ಕೂಡ ಶಿವನಿಗೆ ಸಲ್ಲುವ ಅಷ್ಟವಿಧ ಅರ್ಚನೆ, ಷೋಡಶೋಪಚಾರವೇ ಆಗಿದೆ.

ಕರಸ್ಥಲದ ಇಷ್ಟಲಿಂಗ ಹೃದಯದಿಂದ ಭಾವಸ್ಥಲಕ್ಕೆ, ಭಾವದಿಂದ ಮನಕ್ಕೆ, ಮನದಿಂದ ಕಣ್ಣು, ಕಣ್ಣೊಳಗಿಂದ ಕರಸ್ಥಳಕ್ಕೆ ಬಂದಂತೆ, ನಿಜವಾದ ನೀತಿ ವ್ಯವಹಾರ ವೃತ್ತಿಗಳು ಅದೇ ದೇವನೊಡನೆ ಹೃದಯಸ್ಥಲದಿಂದ ಉಕ್ಕಿಬಂದ ಪೂಜೆಗಳೇ ಆಗಿವೆ. ನಮ್ಮ ಲೋಕವ್ಯವಹಾರವೆಲ್ಲ ಪೂಜೆಯಲ್ಲಿ ತೋಯ್ದು ಬಂದರೆ, ಶಿವಜ್ಞಾನದಲ್ಲಿ ಬೆಳಗಿ ಬಂದರೆ, ಶಿವಭಕ್ತಿಯಲ್ಲಿ ಘ್ರಾಣಿಸಿ ಬಂದರೆ, ಆಗ ಇಲ್ಲಿ ಏನು? ಇಲ್ಲಿ ವ್ಯವಹಾರವೆಲ್ಲ ಲಿಂಗಾರ್ಥ, ಲಿಂಗ ಉದ್ದೇಶ, ಲಿಂಗ ಗಂಭೀರದಿಂದ ಬಂದ ಸತ್ಯ ಪ್ರೇಮ, ಶಾಂತಿ ದಾಂತಿ, ಸಹಾಯ ಉಪಕಾರ, ನಡೆ ನುಡಿ, ನಿರ್ಮಲ ನಿರ್ಮಮ ನಿರಹಂಭಾವ, ಸದುವಿನಯ ಸದಾಚಾರ ಸದ್ವರ್ತನೆ. ಸಚ್ಛೀಲವೆಲ್ಲ ಮಾನವಲಿಂಗವನ್ನು ಮಹಾಲಿಂಗಕ್ಕೆ ಒಯ್ದು ಮುಟ್ಟಿಸುವ ಶಿವಪೂಜೆ; ಸರ್ವಮಂಗಲವಾದ ಲಿಂಗ ಪೂಜೆ. ವಿಶ್ವಬ್ರಹ್ಮಾಂಡ ಲಿಂಗಮಯ. ಶರಣರಾದವರಿಗೆ ಸುಮ್ಮನೆ ಇರುವುದೇ ಲಿಂಗ, ನಡೆನುಡಿಯೆಲ್ಲ ಪೂಜೆ.

ನಿಜವಾದ ನೀತಿ ಹರಿವುದು ಎಲ್ಲಿಂದ? ಲಿಂಗದಿಂದ. ಲಿಂಗಕ್ಕೆ ಅಂಗವಾದ ಲಿಂಗಾಂಗದಿಂದ. ಅಂಗದ ಅವಗುಣ ನಷ್ಟವಾಗಿ, ಲಿಂಗಜ್ವಾಲೆ ಉರಿದು, ಲಿಂಗವೇ ಬೆಳಗುವ ಲಿಂಗ ಚಾರಿತ್ರ್ಯ, ಲಿಂಗನೀತಿ, ಲಿಂಗನಿಯಮಗಳಿಂದ. ಪ್ರಭುದೇವರು ಹೀಗೆ ಹೇಳುತ್ತಾರೆ:

**ದೇಹಗುಣಗಳಳಿದು ಲಿಂಗದೇಹಿಯಾದ ಶರಣನು**
**ಬಹಿರಂಗದ ಬಳಕೆ ಮಾಯಾಮೋಹವನ್ನು ಜಯಿದನು.**

ಲಿಂಗಶರಣನಿಗೆ ಭೂತದೇಹದ ಗುಣ ಎಲ್ಲಿಂದ ತಾನೇ ಬರಬೇಕು?! ವಾಯು ಪ್ರಾಣದ ಧರ್ಮ ತಾನೇ ಎಲ್ಲಿ ಉಳಿದಿದೆ? ಸುಟ್ಟುಹೋಗಿ ಭಸ್ಮವಾಗಿದೆ.

ಶರಣ ಸುಳಿದಾಡಿದ ಕಡೆಯೆಲ್ಲ ಇಂದ್ರಿಯ ವಿಷಯಗಳ ಪೂರ್ವವಾಸನೆ ನಿರ್ವಾಸನೆಯಾಗುತ್ತದೆ; ಲಿಂಗ ವಾಸನೆ, ಲಿಂಗ ಮಕರಂದ, ಲಿಂಗದ ಪರಿಮಳವೇ ಹರವಿಕೊಳ್ಳುತ್ತದೆ. ಇದೇ ಶರಣನ ನೀತಿಪಥ.

(**ಆಧಾರ :** *ವಚನಸಾಹಿತ್ಯ ಸಂಗ್ರಹ*)